PWD ಇಲಾಖೆಗೆ ವಹಿಸಿ ನೇರ ಪರ್ಮಿಟ್ ಕೊಟ್ಟು ಈ ಮಧ್ಯವರ್ತಿಗಳ ಹಾವಳಿಯಿಂದ ತಪ್ಪಿಸಬೇಕೆಂದು ಚಿಂತನೆ ಆಗಿದೆ. ಆದಷ್ಟು ಬೇಗ ಒಂದು ತೀರ್ಮಾನಕ್ಕೆ ಬರುತ್ತೇನೆ. ತೀರ್ಮಾನಕ್ಕೆ ಬರುವುದಕ್ಕೆ ಮುಂಚೆ ನಿಮ್ಮನ್ನೂ ಕರೆದು ಪ್ರತಿಪಕ್ಷದ ನಾಯಕರನ್ನೂ ಕರೆದು ನಿಮ್ಮ ಸಲಹೆಯನ್ನೂ ಪಡೆದುಕೊಳ್ಳುತ್ತೇನೆ. ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ವಿಷಯ. ಇದು ಕೇವಲ ಯಡಿಯೂರಪ್ಪ ಅಥವಾ ಒಬ್ಬ ಶಾಸಕನಿಗೆ ಸಂಬಂಧಪಟ್ಟ ವಿಷಯವಲ್ಲ. ಜನತೆಯ ಪ್ರಶ್ನೆ ಇದು. ಸಮಸ್ಯೆ ಎದುರಿಸುತ್ತಿದ್ದೇವೆ. ಇದಕ್ಕೆ ಪರಿಹಾರ ಹುಡುಕೋಣ. ಆದಷ್ಟು ಬೇಗ ನಿರ್ಧಾರ ಮಾಡಿ ಹೊಸ ನೀತಿಯನ್ನು ಜಾರಿಗೆ ತರೋಣ.

ರಾಜ್ಯದಲ್ಲಿ ವಸತಿ ರಹಿತ ಕುಟುಂಬಗಳ ಬಗ್ಗೆ

30 (59) ಶ್ರೀ ಖಾದರ್ ಯು. ಟಿ: ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಸತಿರಹಿತ ಕುಟುಂಬಗಳನ್ನು ಗುರುತಿಸಲಾಗಿದೆಯೇ (ಕಳೆದ 2 ವರ್ಷಗಳ ಜಿಲ್ಲಾವಾರು ವಿವರ ನೀಡುವುದು);

ಆ) ವಸತಿ ಇಲ್ಲದವರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲು ಇರುವ ಯೋಜನೆಗಳು ಯಾವುವು;

ಇ) ಈ ಪ್ರಸಕ್ತ ವರ್ಷ ರಾಜ್ಯದಲ್ಲಿ ಎಷ್ಟು ಮನೆಗಳ ನಿರ್ಮಾಣಕ್ಕೆ ಹಣ ಕಾಯ್ದಿರಿಸಿದೆ (ಯೋಜನಾವಾರು ವಿವರ ನೀಡುವುದು)

ಈ) ಇದರಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲೆಷ್ಟು?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು):

ಅ) ಹೌದು. ಜಿಲ್ಲಾವಾರು ವಿವರಗಳನ್ನು ಅನುಬಂಧ "ಅ" ದಲ್ಲಿ ಲಗತ್ತಿಸಿದೆ.

ಆ) ರಾಜ್ಯದಲ್ಲಿರುವ ವಸತಿ ರಹಿತರಿಗಾಗಿ ವಸತಿ ಸೌಲಭ್ಯವನ್ನು ಕಲ್ಪಿಸಲು ಇರುವ ಯೋಜನೆಗಳು ಈ ಕೆಳಗಿನಂತಿವೆ.

ಯೋಜನೆ	ಪ್ರದೇಶ
(1) ಗ್ರಾಮೀಣ ಆಶ್ರಯ (2) ಗ್ರಾಮೀಣ ಆಶ್ರಯ ವಿಶೇಷ ವರ್ಗದ ಯೋಜನೆಗಳು, (3) ಗ್ರಾಮೀಣ ಅಂಬೇಡ್ಕರ್, (4) ಇಂದಿರಾ ಆವಾಸ್ ಯೋಜನೆ, (5) ಬಸವ-ಇಂದಿರಾ ವಸತಿ ಯೋಜನೆ (2010-11ನೇ ಸಾಲಿನಿಂದ)	ಗ್ರಾಮೀಣ
(6) ನಗರ ಆಶ್ರಯ, (7) ನಗರ ಆಶ್ರಯ ವಿಶೇಷ ವರ್ಗದ ಯೋಜನೆಗಳು, (8) ವಾಜಪೇಯಿ ನಗರ ಆಶ್ರಯ ಯೋಜನೆ (2010-11ನೇ ಸಾಲಿನಿಂದ)	ನಗರ

ಇ) ಪ್ರಸಕ್ತ ವರ್ಷ ರಾಜ್ಯದಲ್ಲಿ ಬ್ಯಾಕ್‌ಲಾಗ್ ಮನೆಗಳನ್ನು ಒಳಗೊಂಡಂತೆ ಮೂರು ಲಕ್ಷ ಮನೆಗಳ ನಿರ್ಮಾಣಕ್ಕೆ ಹಣ ಕಾಯ್ದಿರಿಸಿದ್ದು, ಯೋಜನಾವಾರು ವಿವರ ಈ ಕೆಳಗಿನಂತಿವೆ.

(ರೂ.ಕೋಟಿಗಳಲ್ಲಿ)

ಯೋಜನೆ	ಮನೆಗಳ ಸಂಖ್ಯೆ	ಕಾಯ್ದಿರಿಸಿದ ಅನುದಾನ
ಬಸವ-ಇಂದಿರಾ ವಸತಿ ಯೋಜನೆ	76,500	382.50
ವಾಜಪೇಯಿ ವಸತಿ ಯೋಜನೆ	20000	100.00
ಇಂದಿರಾ ಆವಾಸ್ ಯೋಜನೆ ಹಿಂದಿನ ಶ್ರೇಣಿಗಳು	85000	274.55
ಆಶ್ರಯ ವಸತಿ ಯೋಜನೆ	100000	254.02
ಅಂಬೇಡ್ಕರ್ ಯೋಜನೆ	12000	45.00
ನಗರ ಆಶ್ರಯ ವಸತಿ ಯೋಜನೆ ಹಿಂದಿನ ಶ್ರೇಣಿಗಳು	6500	–
ಒಟ್ಟು	**300,000**	**1056.07**

ಈ) ಇದರಲ್ಲಿ ಕೇಂದ್ರಸರ್ಕಾರದ ಪಾಲು 334.31 ಕೋಟಿ ರೂ.ಗಳು ಹಾಗೂ ರಾಜ್ಯ ಸರ್ಕಾರದ ಪಾಲು 721.76 ಕೋಟಿ ರೂ.ಗಳು ಆಗಿರುತ್ತದೆ.

ಅನುಬಂಧ–"ಅ"

ಕ್ರಸಂ.	ಜಿಲ್ಲೆ	ವಸತಿ ರಹಿತರ ಸಂಖ್ಯೆ		
		ಗ್ರಾಮೀಣ ಪ್ರದೇಶ	ನಗರ ಪ್ರದೇಶ	ಒಟ್ಟು
1	2	3	4	5
1	Bagalkot	16234	9664	25898
2	Bangalore Rural	23475	436	23910
3	Bangalore Urban	24738	293	25031
4	Belgaum	99286	6199	105485
5	Bellary	47909	5980	53889
6	Bidar	54092	9256	63348
7	Bijapur	40895	266	41161
8	Chamarajanagar	52648	1270	53918
9	Chikkaballapur	41635	613	42248
10	Chikmagalur	26291	2352	28643
11	Chitradurga	90101	1138	91239
12	Dakshina Kannada	14736	273	15009
13	Davanagere	38390	872	39262
14	Dharwad	25019	1258	26377
15	Gadag	14332	1605	15937
16	Gulbarga	53250	4347	57597
17	Hassan	45524	3050	48574
18	Haveri	35365	1560	36925
19	Kodagu	5471	72	5543
20	Kolar	34669	1372	36041

21	Koppal	36330	3503	39833
22	Mandya	47720	651	48371
23	Mysore	76042	3472	79514
24	Raichur	78241	2192	80433
25	Ramanagar	43873	2458	46331
26	Shimoga	33311	3074	36385
27	Tumkur	71345	3132	74477
28	Udupi	12250	133	12383
29	Uttara Kannada	21927	201	22128
30	Yadgir	21247	2652	23899
ಒಟ್ಟು		**1226345**	**73444**	**1299789**

ಶ್ರೀ ಯು. ಟಿ. ಖಾದರ್ : ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಒದಗಿಸಿದ್ದಾರೆ, ಇವರು ಕೊಟ್ಟಿರುವಂತಹ ಉತ್ತರದಲ್ಲಿ ವಸತಿರಹಿತರ ಪಟ್ಟಿ 13 ಲಕ್ಷ ಇದೆ ಎಂದು ಕೊಟ್ಟಿದ್ದಾರೆ. ಪ್ರಸ್ತುತ ವರ್ಷದಲ್ಲಿ ತಾವು ಅದರಲ್ಲಿ ಎಷ್ಟು ಯಶಸ್ವಿಯಾಗಿದ್ದೀರಿ ಗೊತ್ತಿಲ್ಲ. ಆದರೂ ಕೂಡ ಒಟ್ಟಾರೆ 3 ಲಕ್ಷ ಮನೆಗಳು ಎಂದು ಟಾರ್ಗೆಟ್ ಇಟ್ಟಿದ್ದಾರೆ. ಒಂದು ವರ್ಷದಿಂದ 9 ಲಕ್ಷ ಮನೆಗಳು ಬ್ಯಾಕ್‌ಲಾಗ್ ಆಗುವಂತಹ ವ್ಯವಸ್ಥೆಯಾಗುತ್ತಿದೆ. ಇದರ ಬಗ್ಗೆ ಮತ್ತೊಂದು ಮಾತನ್ನು ನಾನು ಹೇಳುವುದಕ್ಕೆ ಇಚ್ಚಿಸುತ್ತೇನೆ. ಮೂರು ಲಕ್ಷ ಮನೆಗಳನ್ನು ಖಂಡಿತವಾಗಿ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುವುದಕ್ಕೆ ಇಚ್ಚೆ ಪಡುತ್ತೇನೆ. ಇವತ್ತು ಹಲವಾರು ಸಮಸ್ಯೆಗಳಿವೆ. ನಾವು ಒಂದು ಕೈಯಿಂದ ಯೋಜನೆ ಕೊಡುತ್ತಿದ್ದೇವೆ, ಇನ್ನೊಂದು ಕೈಯಿಂದ ಅದನ್ನು ತಡೆಹಿಡಿಯವಂತಹ ಕೆಲಸ ಆಗುತ್ತಿದೆ. ಬೇರೆ ಬೇರೆ ಕಾನೂನುಗಳಿವೆ. ಹಕ್ಕುಪತ್ರ ಹೆಂಡತಿ ಅಥವಾ ಗಂಡನ ಹೆಸರಿನಲ್ಲಿರಬೇಕೆಂದು ಇದ್ದರೆ, ಈ ಹಿಂದೆ ಮಾನ್ಯ ಎಸ್.ಎಂ. ಕೃಷ್ಣ ಸರ್ಕಾರ ಇದ್ದಾಗ ಯಾರಾದರೂ ಒಬ್ಬ ಬಡ ಜಮೀನ್ದಾರರಿಗೆ 5 ಸೆಂಟ್ಸ್ ಅಥವಾ ಮೂರು ಸೆಂಟ್ಸ್ ಒಪ್ಪಿಗೆ ಪತ್ರ ಕೊಟ್ಟಿದ್ದರೂ ಸಹಿತ ಆಶ್ರಯ ಮನೆ ಕೊಟ್ಟು ಬಹಳಷ್ಟು ಜನರಿಗೆ ಪ್ರಯೋಜನಗಳಾಗಿವೆ. ಎರಡನೆಯದಾಗಿ ಆದಾಯ, ನಾವು 14,000 ರೂ. ಗೆ ಮೀಸಲಾಗಿದ್ದುಕೊಂಡು ಇವತ್ತು ಆದಾಯ ಸರ್ಟಿಫೀಕೇಟ್

ಮಾಡಿದರೆ ಅವರಿಗೆ ಆಶ್ರಯ ಸಮಿತಿ ಯಾವ ರೀತಿ ಮಂಜೂರು ಮಾಡುತ್ತದೆ ಎಂದು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಕೇಂದ್ರ ಸರ್ಕಾರದವರೂ ಕೂಡ ನಗರ ಪ್ರದೇಶಗಳಲ್ಲಿ 'ನಮ್ಮ ಮನೆ' ಯೋಜನೆಗೆ ಒಂದು ಲಕ್ಷ ರೂ. ಗಳವರೆಗೆ ಆದಾಯವನ್ನು ಏರಿಸಿದೆ. ಕಡು ಬಡವರಿಗೆ ಕೊಡುವುದು 61,000 ರೂ. ವರೆಗೆ ಆದಾಯ ಮಿತಿ ಏರಿಸಿದೆ. ಆದಕಾರಣ ಇವತ್ತು ಆಶ್ರಯ ಯೋಜನೆಯಲ್ಲಿ ವಸತಿ ರಹಿತರಿಗೆ ವಸತಿ ಕೊಡುವಂತಹ ಯೋಜನೆ ಸುಲಲಿತವಾಗಿ ಆಗಬೇಕಾದರೆ, ಇಂತಹ ಸಣ್ಣ ಪುಟ್ಟ ಸಮಸ್ಯೆಗಳ ಬಗ್ಗೆ ದೀರ್ಘವಾಗಿ ಚರ್ಚಿಸಿ ಅದನ್ನು ದೂರ ಮಾಡುವಂತಹ ಕೆಲಸ ಇವತ್ತು ಆಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರ EWS, LIG, ಆಶ್ರಯ, ಇಂದಿರಾ ಆವಾಸ್ ಈ ಯೋಜನೆಗಳಲ್ಲಿ ವರ್ಷಾವಾರು ಆರ್ಥಿಕ ಆದಾಯ ಏನು ನಿಗದಿ ಮಾಡಿದೆ, ಅದೇ ರೀತಿಯಲ್ಲಿ ರಾಜ್ಯ ಸರ್ಕಾರ ಕೂಡ ಆ ಅನುಪಾತದಲ್ಲಿ, ನಾವು ಆಶ್ರಯ ಮನೆಗಳ ವಸತಿ ಯೋಜನೆಯಲ್ಲಿ ಜಾರಿಗೆ ತಂದಿದ್ದೇವೆ. ಇದಲ್ಲದೆ ಈ ವರ್ಷ ಅವರು ಏನು ಕೆಲವರಿಗೆ ಹಕ್ಕುಪತ್ರ ಕೊಡುವುದರ ಬಗ್ಗೆ ಕೇಳಿದ್ದಾರೆ, ಅದು ಕಂದಾಯ ಇಲಾಖೆಯವರ ಜೊತೆಯಲ್ಲಿ ಮಾತನಾಡಿ ಏನಾದರೂ ನ್ಯೂನತೆಗಳಿದ್ದರೆ ಅವುಗಳನ್ನು ಸರಿಪಡಿಸಿ ಅವರಿಗೆ ಹಕ್ಕು ಪತ್ರ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳೋಣ. ಈ ವರ್ಷ ನಾವು ಹೊಸದಾಗಿ 2.50 ಲಕ್ಷ ಸೈಟುಗಳನ್ನು ರಚನೆ ಮಾಡಿ ಗ್ರಾಮೀಣ ಪ್ರದೇಶದ ಜನರಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದರಿಂದ ಬಡವರ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ದಿಕ್ಕಿನಲ್ಲಿ ಈಗಾಗಲೇ ಸುಮಾರು 54 ಕೋಟಿ ರೂ.ಗಳಷ್ಟು ಹಣವನ್ನು ಭೂಮಿಯನ್ನು ಖರೀದಿ ಮಾಡಿ, ನಿವೇಶನಗಳನ್ನು ರಚನೆ ಮಾಡಿ ಅವರಿಗೆ ಹಕ್ಕುಪತ್ರಗಳನ್ನು ಕೊಡಿ ಎಂದು ಈಗಾಗಲೇ ನಾವು ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೇವೆ. ತಾವು ಹೇಳಿದ್ದು ಸರಿ ಇದೆ. ತಮಗೆ ಏನು ಕೊಟ್ಟಿದ್ದೇವೆ, ಇದು 2003ನೇ ಇಸವಿಯಲ್ಲಿ ತೆಗೆದುಕೊಂಡಂತಹ ಲೆಕ್ಕ. ಇನ್ನು ಹೊಸದಾಗಿ ಮಾಡಬೇಕಾಗಿದೆ. ಇನ್ನೂ ಎಷ್ಟು

ವಸತಿರಹಿತರಿದ್ದಾರೆ, ನಿವೇಶನರಹಿತರಿದ್ದಾರೆಂದು ಮತ್ತೊಮ್ಮೆ ಸಮೀಕ್ಷೆ ಆಗಬೇಕಾಗಿದೆ. ಸದ್ಯದಲ್ಲಿಯೇ ಪ್ರಾರಂಭ ಮಾಡುತ್ತಿದ್ದೇವೆ. ಈಗಾಗಲೇ ಆದಾಯ ಹೆಚ್ಚಸಬೇಕೆಂದು ಹೇಳಿದ್ದೀರಿ. ಅದನ್ನು ನಾವು ಈ ವರ್ಷ ಹೆಚ್ಚಿಸಿದ್ದೇವೆ. ಕೇಂದ್ರ ಸರ್ಕಾರ ಹಿಂದೆ 35,000 ರೂ. ಮಾಡಿದ್ದನ್ನು ನಾವು 40,000 ರೂ ಮಾಡಿದ್ದೇವೆ, ಈ ವರ್ಷ ಅದನ್ನು ನಾವು 63,000 ರೂ.ಗೆ ಹೆಚ್ಚಿಸಿದ್ದೇವೆ. 63,000ರೂ ಮಾಡಿದ ಉದ್ದೇಶ ಏನೆಂದರೆ, 40,000 ರೂ.ಗಳಲ್ಲಿ ಸಣ್ಣ ಮನೆ ಆಗುತ್ತದೆ, ಸಾಕಾಗುವುದಿಲ್ಲ, ಅದರಿಂದ 63,000 ರೂ. ಹೆಚ್ಚು ಮಾಡಿದರೆ ದೊಡ್ಡ ಮನೆ ಕಟ್ಟಿಕೊಳ್ಳಬಹುದು ಎಂದು ಹಣವನ್ನೂ ಕೂಡ ಹೆಚ್ಚಳ ಮಾಡಿದ್ದೇವೆ. ಬಡವರಿಗೆ ವಸತಿ, ಸೂರನ್ನು ಕಲ್ಪಿಸಿಕೊಡಬೇಕೆಂಬ ಮುಖ್ಯ ಉದ್ದೇಶವಿರುವುದರಿಂದ ಆ ದಿಸೆಯಲ್ಲಿ ನಾವು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಖಂಡಿತವಾಗಿ ಆ ದಿಸೆಯಲ್ಲಿ ಕಾರ್ಯೋನ್ಮುಖರಾಗುತ್ತೇವೆ.

ಶ್ರೀ ಯು. ಟಿ. ಖಾದರ್ : ಕೇಂದ್ರ ಸರ್ಕಾರದವರು 60,000 ರೂ. ಮಾಡಿದರೆ ನಗರ ಪ್ರದೇಶದಲ್ಲಿ, ನಮ್ಮ ಮನೆ ಯೋಜನೆಯಲ್ಲಿ ಒಂದು ಲಕ್ಷ ರೂ. ಕೊಡುತ್ತಿದ್ದಾರೆ. ಆದಾಯದ ಬಗ್ಗೆ ರಾಜ್ಯ ಸರ್ಕಾರ ಜಿಲ್ಲಾಧಿಕಾರಿಗಳಿಗೆ ಸ್ಪಷ್ಟವಾದ ನಿರ್ದೇಶನವನ್ನು ಕೊಡಬೇಕು. ಕೇಂದ್ರ ಸರ್ಕಾರದವರು 60,000 ರೂ. ಮಾಡಿದಹಾಗೆ ಇಲ್ಲಿಯೂ 60,000 ರೂ. ಮಾಡಬೇಕು. ಇದು ಒಂದು. ಎರಡನೆಯದಾಗಿ ಆಶ್ರಯ ಸಮಿತಿಗೆ ಯಾರು ಅಧ್ಯಕ್ಷರು ಎಂದು ಎಲ್ಲರೂ ಗೊಂದಲದಲ್ಲಿದ್ದಾರೆ. ಯಾರಿಗೆ ಅಧಿಕಾರ ಇದೆ ಎಂದು ಅಧಿಕಾರಿಗಳಿಗೂ ಸರಿಯಾಗಿ ಗೊತ್ತಿಲ್ಲ. ನನ್ನ ವೈಯುಕ್ತಿಕ ಅಭಿಪ್ರಾಯವೇನೆಂದರೆ ಆಶ್ರಯ ಸಮಿತಿಯ ಆಯ್ಕೆ ಸಮಿತಿ ಅಧಿಕಾರ ಗ್ರಾಮ ಪಂಚಾಯಿತಿಗಳಿಗೇ ಇರಲಿ. ಶಾಸಕರಿಗೆ ಬೇಡ. ಇದು ನನ್ನ ವೈಯಕ್ತಿಕ ಅಭಿಪ್ರಾಯ. ನೀವು ಸದನದಲ್ಲಿ ತೆಗೆದುಕೊಳ್ಳುವ ತೀರ್ಮಾನ. ಆದರೆ ಯಾವುದಾದರೂ ಒಂದು ಸ್ಪಷ್ಟ ನಿರ್ದೇಶನ ಕೊಡುವ ಕೆಲಸವನ್ನು ಸರ್ಕಾರ ಇವತ್ತು ಮಾಡಬೇಕಾಗಿದೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ಸರ್ಕಾರ ಈಗಾಗಲೇ ಆಯಾ ಜಿಲ್ಲಾಧಿಕಾರಿಗಳಿಗೆ ಹಾಗೂ ಆಯಾ ಕಾರ್ಯನಿರ್ವಹಣಾಧಿಕಾರಿಗಳಿಗೆ ಸ್ಪಷ್ಟವಾದ ನಿರ್ದೇಶನವನ್ನು ಕಳುಹಿಸಿ ಕೊಟ್ಟಿದ್ದೇವೆ. ಕಳೆದ ತಿಂಗಳ ಅಂತ್ಯದೊಳಗೆ ಅವರು ಪಟ್ಟಿಯನ್ನು

ಕಳುಹಿಸಬೇಕಾಗಿದೆ. ಗ್ರಾಮ ಸಭೆಗಳಲ್ಲಿ ಆಶ್ರಯ ಮನೆಗಳ ಪಟ್ಟಿಯನ್ನು ತಯಾರು ಮಾಡಿ ತಾವು ಕಳುಹಿಸಬೇಕಾಗಿದೆ. ಇಲ್ಲಿಯವರೆಗೆ ಅದು ಬರುತ್ತಿಲ್ಲ. ಕಳೆದ ತಿಂಗಳೇ ಕೊನೆ ಎಂದು ನಾವು ಪ್ರತಿಯೊಬ್ಬ ಜಿಲ್ಲಾಧಿಕಾರಿಗೆ ಹಾಗೂ ಕಾರ್ಯನಿರ್ವಹಣಾಧಿಕಾರಿಗೆ ಸುತ್ತೋಲೆ ಕಳುಹಿಸಿದ್ದೇವೆ. ಎಲ್ಲಾ ಶಾಸಕರಿಗೂ ನಾವು ಕಳುಹಿಸಿಕೊಟ್ಟಿದ್ದೇವೆ. ಸ್ಪಷ್ಟವಾದ ಗೈಡ್‌ಲೈನ್ಸ್ ಅನ್ನು ನಾವು ಕೊಟ್ಟಿದ್ದೇವೆ.

ಅಧ್ಯಕ್ಷರು: ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಅದರ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್. ಸುರೇಶ್ ಕುಮಾರ್(ಕಾನೂನು, ನಗರಾಭಿವೃದ್ಧಿ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 29,06,2010ರ 2ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 45 ಪ್ರಶ್ನೆಗಳ ಪೈಕಿ 30 ಪ್ರಶ್ನೆಗಳ ಉತ್ತರಗಳನ್ನು ಹಾಗೂ ದಿನಾಂಕ 28.06.2010ರ 1ನೇ ಪಟ್ಟಿಯಿಂದ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 9 ಪ್ರಶ್ನೆಗಳ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 35 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಅನುಬಂಧ – 1, ಅನುಬಂಧ – 2)

12.30 ಪಿ.ಎಂ

ಅಧ್ಯಕ್ಷರು : ಮಂಡಿಸಲಾಯಿತು ಈಗ ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿ/ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಸಭೆಯ ಮುಂದೆ ಮಂಡಿಸುವುದು.

3. ಕಾರ್ಯದರ್ಶಿಯವರ ವರದಿ:

ಕಾರ್ಯದರ್ಶಿ (ಕರ್ನಾಟಕ ವಿಧಾನಸಭೆ): ಗೌರವಾನ್ವಿತ ಸಭಾಧ್ಯಕ್ಷರ ಅನುಮೋದನೆಯೊಂದಿಗೆ ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿ/ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಈಗ ಸಭೆಯ ಮುಂದೆ ಮಂಡಿಸುತ್ತೇನೆ.